ಶಿಕ್ಷಣ ವಿಚಾರ

# ಬೌದ್ಧಿಕ ಶಿಕ್ಷಣ – ಮಾನಸಿಕ ಶಿಕ್ಷಣ

ಡಾ. ಡಿ.ಕೆ.ರಾಜೇಂದ್ರ



ವಿದ್ಯಾಭ್ಯಾಸವು ಕೇವಲ ಬುದ್ಧಿಯ ಬೆಳವಣಿಗೆಗೆ ಮಾತ್ರ ಮಹತ್ವವನ್ನು ನೀಡಬಾರದು, ಹೃದಯವಂತಿಕೆಯನ್ನೂ ಬೆಳೆಸಬೇಕು. ಇದನ್ನು ವಿವರಿಸಿರುವ ಮಾನ್ಯ ಲೇಖಕರು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾದವರು. ಸದ್ಯ ಈಗ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಗೌರವ ನಿರ್ದೇಶಕರು.

**ಶಿಕ್ಷಣ** ವ್ಯಕ್ತಿಯ ಸರ್ವತೋಮುಖವಾದ ಬೆಳವಣಿಗೆಗೆ ಪೂರಕವಾಗಬೇಕೆಂಬುದು ನಿಜ. ಹಾಗಾದಾಗ ಮಾತ್ರ ಅದು ನಿಜವಾದ ಶಿಕ್ಷಣ ಎನಿಸಿಕೊಳ್ಳುತ್ತದೆ. ಆದರೆ ಅನೇಕ ವೇಳೆ ಅದು ಹಾಗಾಗುವುದಿಲ್ಲ. ಎಲ್ಲಿಯೋ ತಿರುವನ್ನು ಪಡೆದು, ಬೌದ್ಧಿಕ ಶಿಕ್ಷಣವೇ ಬೇರೆ, ಮಾನಸಿಕ ಶಿಕ್ಷಣವೇ ಬೇರೆ ಎಂಬಂತಾಗಿದೆ.

ಬೌದ್ಧಿಕ ಶಿಕ್ಷಣ ವ್ಯಕ್ತಿಯಲ್ಲಿ ಆಯಾ ವಿಷಯಗಳ ಜ್ಞಾನವನ್ನು ತುಂಬಿ ಬುದ್ಧಿಯನ್ನು ಹೆಚ್ಚಿಸುತ್ತದೆ. ಅವನ ಬದುಕಿನ ಸಮೃದ್ಧತೆಗೂ ಕಾರಣವಾಗುತ್ತದೆ. ಈಗ ವಿದ್ಯೆ ಕಲಿಯುವುದೆಂದರೆ ಆಯಾ ವಿಷಯದಲ್ಲಿ ಪರಿಣತಿಯನ್ನು ಪಡೆದು ಬದುಕಿಗೆ ದಾರಿ ಮಾಡಿಕೊಳ್ಳುವುದು ಎಂದೇ ಅರ್ಥ ಪಡೆದಿದೆ. ಹಾಗಾಗಿಯೇ ಒಂದು ರೀತಿಯ ಮಾನವಯಂತ್ರಗಳು ಸಿದ್ಧಗೊಂಡು ವಿಶ್ವವಿದ್ಯಾನಿಲಯಗಳಿಂದ ಹೊರಬರುತ್ತಿವೆ. ಆ ಮೂಲಕ ಬುದ್ಧಿಗೆ ಮಾತ್ರವೇ ಪ್ರಾಧಾನ್ಯ ಕೊಟ್ಟು ಮನಸ್ಸನ್ನು ನಿಷ್ಕ್ರಿಯಗೊಳಿಸುವ ಕಾರ್ಯ ಗೊತ್ತಿದ್ದೋ ಗೊತ್ತಿಲ್ಲದೆಯೋ ಇಂದು ನಡೆಯುತ್ತಿದೆ. ಇದರಿಂದ ಸ್ವಾರ್ಥದ ಹೆಚ್ಚಳ ಕಂಡುಬರುತ್ತಿದೆಯೇ ಹೊರತು ಸರ್ವೋದ್ಧಾರದ ಚಿಂತನೆಯಲ್ಲ.

ಸ್ವಾಮಿ ವಿವೇಕಾನಂದರು ಈ ನಿಟ್ಟಿನಲ್ಲಿ ಹೇಳಿರುವ ಮಾತುಗಳು ತುಂಬಾ ಅರ್ಥಗರ್ಭಿತವಾಗಿವೆ: "ಎಲ್ಲಿಯವರೆಗೆ ಹೊಟ್ಟೆಗೆ ಹಿಟ್ಟಿಲ್ಲದೆ ಸಾವಿರಾರು ಜನ ಸಾಯುತ್ತಿರುವರೋ ಅಲ್ಲಿಯವರೆಗೆ ಅವರ ಶ್ರಮದಿಂದ ವಿದ್ಯಾಭ್ಯಾಸವನ್ನು ಪಡೆದು ಅವರಿಗಾಗಿ ಮರುಗದ ಪ್ರತಿಯೊಬ್ಬ ವಿದ್ಯಾವಂತನನ್ನೂ ವಿಶ್ವಾಸಘಾತುಕನೆಂದೇ ನಾನು ಕರೆಯುತ್ತೇನೆ."

ನಿಜವಾದ ವಿದ್ಯೆ ಕೇವಲ ಬುದ್ಧಿಯನ್ನು ಬೆಳಸುವಂತಿದ್ದರೆ ಸಾಲದು, ಅದು ಮನಸ್ಸನ್ನೂ ವಿಕಾಸಗೊಳಿಸುವಂತಿರಬೇಕು. ಜೀವನದಲ್ಲಿ ಎಲ್ಲರೂ ಒಂದೇ ಬಗೆಯ ಅವಕಾಶವನ್ನು ಪಡೆದು ಬಂದಿರುವುದಿಲ್ಲ. ಆದರೆ ಹಾಗೆ ಪಡೆದುಬಂದವರು ಅದರಿಂದ ವಂಚಿತರಾದವರನ್ನು ಕೈಹಿಡಿದು ಮೇಲಕ್ಕೆತ್ತುವ ಮನಸ್ಸನ್ನು ಹೊಂದಿರಬೇಕಾಗುತ್ತದೆ. ಬುದ್ಧಿಯನ್ನು ಬೆಳೆಸುವ ಶಿಕ್ಷಣ, ಮನಸ್ಸನ್ನು ಅರಳಿಸುವುದರ ಕಡೆಗೂ ಗಮನ ಕೊಟ್ಟಾಗ ಮಾತ್ರ ಇದು ಸಾಧ್ಯ.

ಬುದ್ಧಿಗೂ ಮನಸ್ಸಿಗೂ ಸಂಬಂಧವಿದ್ದರೂ, ಅನೇಕ ವೇಳೆ ಅವೆರಡರ ಅಸಹಕಾರದಿಂದ ಮನುಷ್ಯ ದಾರಿ ತಪ್ಪುವುದುಂಟು. ಹಾಗಾದಾಗ ಅವುಗಳಿಂದಾಗುವ ಪರಿಣಾಮಗಳು ಭೀಕರವಾಗಿಯೇ ಇರುತ್ತವೆ. ಇದನ್ನು ತಪ್ಪಿಸಬೇಕಾದರೆ ಬೌದ್ಧಿಕ ಶಿಕ್ಷಣಕ್ಕೆ ಕೊಡುವಷ್ಟೇ ಪ್ರಾಧಾನ್ಯತೆಯನ್ನು ಮನಸ್ಸಿನ ಶಿಕ್ಷಣಕ್ಕೂ ನೀಡುವ ಅಗತ್ಯವಿದೆ. ಹೊರಗಿನ ಶಿಕ್ಷಣದ ಮೂಲಕ ಬುದ್ಧಿಯ ಬೆಳವಣಿಗೆ ಮಾತ್ರ ಸಾಧ್ಯ. ಆದರೆ ಮನಸ್ಸಿನ ವಿಕಾಸಕ್ಕೆ ಒಳಗಿನ ಶಿಕ್ಷಣದ ಅಗತ್ಯವಿದೆ. ಇದನ್ನೇ 'ಆಧ್ಯಾತ್ಮಿಕ ಶಿಕ್ಷಣ'ವೆಂದೂ ಕರೆಯಬಹುದು.

ಈ ಕುರಿತು ಸ್ವಾಮಿ ವಿವೇಕಾನಂದರ ಒಂದು ನುಡಿ ಹೀಗಿದೆ: "ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನವೆಲ್ಲ ಮಾನವನ ಮನಸ್ಸಿನಲ್ಲಿದೆ. ಅನೇಕ ವೇಳೆ ಇದು ಕಾಣುವುದಿಲ್ಲ. ಯಾವುದರಿಂದಲೋ ಮುಚ್ಚಿಹೋಗಿರುವುದು. ಆ ಮುಸುಕನ್ನು ತೆರೆದಂತೆ 'ನಾವು ತಿಳಿಯುತ್ತಿರುವೆವು' ಎಂದು ಭಾವಿಸುವೆವು. ಅನಾವರಣ ಹೆಚ್ಚಾದಂತೆಲ್ಲಾ ಜ್ಞಾನವು ವಿಕಾಸಗೊಳ್ಳುತ್ತಾ ಬರುವುದು. ಯಾರಲ್ಲಿ ಇನ್ನೂ ಇದು ದಟ್ಟವಾಗಿ ಮುಚ್ಚಿಕೊಂಡಿರುವುದೋ ಅವನು

ಅಜ್ಞಾನಿ, ಯಾರಲ್ಲಿ ಈ ತೆರೆ ಸಂಪೂರ್ಣವಾಗಿ ಹೋಗಿರುವುದೋ ಅವನೇ ಜ್ಞಾನಿ ಅಥವಾ ಸರ್ವಜ್ಞ.”

ಮಿದುಳಿಗೆ ಕೊಡುವ ಶಿಕ್ಷಣವೇ ಬೇರೆ, ಮನಸ್ಸಿಗೆ ಕೊಡುವ ಶಿಕ್ಷಣವೇ ಬೇರೆ. ಇವೆರಡೂ ಒಂದೇ ಆಗಿರಲು ಸಾಧ್ಯವಿಲ್ಲ. ಮನಸ್ಸಿಗೂ ಬುದ್ಧಿಗೂ ನೇರ ಸಂಬಂಧವಿದೆ ಎಂಬುದೇನೋ ನಿಜ. ಆದರೆ ಎಷ್ಟೋ ವೇಳೆ ಮನಸ್ಸು ಹೇಳಿದ್ದನ್ನು ಬುದ್ಧಿ ಕೇಳದೆ ಹೋಗಬಹುದು, ಅಂತೆಯೇ ಬುದ್ಧಿ ಹೇಳಿದ್ದನ್ನು ಮನಸ್ಸು ಸ್ವೀಕರಿಸದೆಯೂ ಇರಬಹುದು. ಇದಕ್ಕೆ ಮುಖ್ಯ ಕಾರಣ, ಅವೆರಡರಲ್ಲಿ ಹೊಂದಾಣಿಕೆ ಇಲ್ಲದಿರುವುದು. ಮನಸ್ಸಿನ ಮೃದು ನಾದವನ್ನು ಬುದ್ಧಿ ಆಲಿಸಬೇಕಾದರೆ ಬುದ್ಧಿಯೂ ಅದಕ್ಕೆ ತಕ್ಕಂತೆ ತನ್ನ ಶ್ರುತಿಯನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ ಇವೆರಡೂ ಪರಸ್ಪರ ಅನ್ಯೋನ್ಯವಾಗಿರುವುದು ಅನಿವಾರ್ಯ.

ಮನಸ್ಸು ಕೋತಿಯಿದ್ದಂತೆ. ಅದನ್ನು ಹಿಡಿದಿಡಲು ಸಾಧನೆ ಬೇಕಾಗುತ್ತದೆ. ಮನಸ್ಸಿನ ಸಂಸ್ಕಾರ ಬೇಕಾಗುತ್ತದೆ. ಅದೂ ಒಂದು ತಪಸ್ಸಿನಂತೆ. ಇದು ಲೌಕಿಕ ಶಿಕ್ಷಣದಿಂದಷ್ಟೇ ಸಾಧ್ಯವಾಗುವಂಥದ್ದಲ್ಲ. ಲೌಕಿಕ ವಿದ್ಯೆ ಹೊರಗಿನ ಬೆಳಕಿದ್ದಂತೆ. ಆದರೆ ಒಳಗಿನ ಕಾಂತಿಯನ್ನು ಬೆಳಗಿಸಬೇಕಾದರೆ ಬೇರೊಂದು ತೆರನಾದ ಶಿಕ್ಷಣವೇ ಬೇಕಾಗುತ್ತದೆ. ಈ ಬಗೆಯ ‘ವಿದ್ಯೆ’ ಅಥವಾ ‘ಶಿಕ್ಷಣ’ ವ್ಯಕ್ತಿಯ ನಡೆ–ನುಡಿಯ ಮಧ್ಯೆ ಸೇತುವೆಯಾಗುವಂಥದು.

“ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲ, ಆಚರಣೆಯಲ್ಲಿ. ಒಳ್ಳೆಯವನಾಗಿರುವುದು ಮತ್ತು ಒಳ್ಳೆಯದನ್ನು ಮಾಡುವುದು –ಇದೇ ಧರ್ಮದ ಸರ್ವಸ್ವ” – ಸ್ವಾಮಿ ವಿವೇಕಾನಂದರು ನುಡಿಯುವ ಈ ಮಾತು ಧರ್ಮಕ್ಕಷ್ಟೇ ಸೀಮಿತವೆನಿಸುವುದಿಲ್ಲ, ಶಿಕ್ಷಣವನ್ನೂ ಅದು ಒಳಗೊಳ್ಳುತ್ತದೆ. ಶಿಕ್ಷಣ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುವಂತಹುದು. ಇದಕ್ಕೆ ಸಹಾಯವಾಗಲೆಂದೇ ಮನಸ್ಸಿಗೆ ತರಬೇತಿ ಕೊಡುವ ವಿವಿಧ ಬಗೆಯ ತರಬೇತಿ ಕೇಂದ್ರಗಳು ಅಲ್ಲಲ್ಲಿ ಆರಂಭಗೊಂಡಿವೆ. ಆ ಮೂಲಕ ಮನಸ್ಸನ್ನು ಎಚ್ಚರಗೊಳಿಸುವ ಹಾಗೂ ಅದನ್ನು ನಿಯಂತ್ರಿಸಲು ಬೇಕಾದ ಶಿಕ್ಷಣದ ತರಬೇತಿ ನಡೆಯುತ್ತಿದೆ. ಆದರೆ ತರಬೇತಿಯ ನಂತರವೂ ಫಲಶ್ರುತಿ ಮುಂದುವರಿದರೆ ಒಳ್ಳೆಯದು.

ಒಬ್ಬರಿಗೆ ಸಹಾಯ ಮಾಡುವುದರಿಂದ ಎಷ್ಟೋ ವೇಳೆ ನಾವು ಕಳೆದುಕೊಳ್ಳುವುದು ಏನೂ ಇರುವುದಿಲ್ಲ. ಆದರೂ ಅದಕ್ಕೆ ಹಿಂದೆ ಮುಂದೆ ನೋಡುತ್ತೇವೆ. ಇದಕ್ಕೆ ಮೂಲಕಾರಣ ನಮ್ಮ ಸಂಕುಚಿತ ಮನೋಭಾವ; ಸಂತೋಷವನ್ನು ಹಂಚಿಕೊಂಡು ಖುಷಿಪಡುವುದರಲ್ಲಿರುವ ಕೊರತೆ.

ಇದನ್ನು ಕುರಿತು ಶ್ರೀ ರಾಮಕೃಷ್ಣ ಪರಮಹಂಸರು ಒಂದು ಸೊಗಸಾದ ದೃಷ್ಟಾಂತ ಕಥೆಯನ್ನು ಹೇಳಿದ್ದಾರೆ:

ಮೂವರು ಸ್ನೇಹಿತರು ಮೈದಾನದಲ್ಲಿ ತಿರುಗಾಡುತ್ತಿದ್ದರು. ತಿರುಗಾಡುತ್ತಾ ಎತ್ತರದ ಗೋಡೆಗಳಿಂದ ಆವೃತವಾದ ಒಂದು ಜಾಗಕ್ಕೆ ಬಂದರು. ಒಳಗಡೆಯಿಂದ ಮಧುರವಾದ ಗಾಯನ ಕೇಳಿಬರುತ್ತಿತ್ತು. ಒಳಗೇನಿದೆ ಎಂದು ನೋಡುವ ಇಚ್ಛೆಯಾಯಿತು. ಆದರೆ ಎಲ್ಲೂ ಒಳಗೆ ಹೋಗಿ ನೋಡಲು ಬಾಗಿಲು ಇರಲಿಲ್ಲ.

> ಪ್ರಪಂಚ ಇದುವರೆಗೂ ಕಾಣದ ದೊಡ್ಡ ವಿದ್ಯಾವಂತರು ನಾವಾಗಿರಬಹುದು. ಆದರೂ ನಾವು ದೇವರ ಸಮೀಪಕ್ಕೆ ಬರದೇ ಇರಬಹುದು. ಇದಕ್ಕೆ ವಿರುದ್ಧವಾಗಿ ಬುದ್ಧಿ ಹೆಚ್ಚಿದಷ್ಟೂ ಅಧರ್ಮಿಗಳೂ ಜಾಸ್ತಿಯಾಗಿರುವರು. ಪಾಶ್ಚಾತ್ಯ ಸಂಸ್ಕೃತಿಯ ಕುಂದುಗಳಲ್ಲಿ ಇದೂ ಒಂದು – ಭಾವವನ್ನು ಪೋಷಿಸದೆ ಕೇವಲ ಬುದ್ಧಿಯ ಶಿಕ್ಷಣದ ಕಡೆಗೆ ಗಮನ ಕೊಡುವುದು, ಮನುಷ್ಯರನ್ನು ಹತ್ತುಪಾಲು ಸ್ವಾರ್ಥಪರನನ್ನಾಗಿ ಮಾತ್ರ ಮಾಡುವುದು. ಬುದ್ಧಿಗೂ ಭಾವಕ್ಕೂ ಸಂಘರ್ಷಣೆ ನಡೆದಾಗ, ಭಾವವನ್ನು ಅನುಸರಿಸಿ. ಭಾವವೇ ಬುದ್ಧಿಯ ಕೈಗೆ ನಿಲುಕದ ಪರಮ ಗುರಿಯೆಡೆಗೆ ನಮ್ಮನ್ನು ಕರೆದೊಯ್ಯುವುದು. ಇದೇ ಬುದ್ಧಿಯನ್ನು ಮೀರಿದ ಸ್ಫೂರ್ತಿಯನ್ನು ಕೂಡ ನೀಡುವುದು. ಯಾವಾಗಲೂ ಭಾವವನ್ನು ಪೋಷಿಸಿಕೊಳ್ಳಿ. ಭಾವದ ಮೂಲಕ ದೇವರು ಮಾತಾಡುವನು.
>
> **– ಸ್ವಾಮಿ ವಿವೇಕಾನಂದ**

ಒಬ್ಬ ಮಾತ್ರ ಎಲ್ಲಿಂದಲೋ ಒಂದು ಏಣಿಯನ್ನು ತಂದು ಅದನ್ನೇರಿ ಮೇಲಕ್ಕೆ ಹೋದ. ಮೇಲೆ ಹೋದವನು ಒಳಗೆ ನಡೆಯುತ್ತಿರುವುದನ್ನು ನೋಡಿ ಆನಂದಾತಿರೇಕದಿಂದ, “ಆಹಾ! ಆಹಾ!” ಎಂದು ಉದ್ಗರಿಸುತ್ತಾ ಅದರ ಒಳಗೆ ಹಾರಿಯೇ ಬಿಟ್ಟ. ಅಲ್ಲೇನು ನಡೆಯುತ್ತಿದೆ ಎಂಬುದನ್ನು ಉಳಿದಿಬ್ಬರಿಗೆ ತಿಳಿಸುವ ಮನಸ್ಸನ್ನು ಮಾಡಲಿಲ್ಲ. ಉಳಿದಿಬ್ಬರು “ಇವನೆಂಥ ವ್ಯಕ್ತಿ!” ಎಂದು ಭಾವಿಸಿದರು. ನಂತರ ಎರಡನೆಯವನು ಏಣಿ ಏರಿ ಮೇಲೆ ಹೋದ. ಆತನೂ ಮೊದಲಿನವನಂತೆಯೇ, ಒಳಗೆ ನಡೆಯುವುದನ್ನು ನೋಡಿ ಹರ್ಷದಿಂದ, “ಆಹಾ ಆಹಾ!” ಎಂದು ಒಳಗೆ ಹಾರಿದ. ಈಗ ಮೂರನೆಯವನ ಸರದಿ. ಅವನೂ ಒಳಗೆ ನಡೆಯುತ್ತಿದ್ದ ಆನಂದದ ಮೇಳವನ್ನು ನೋಡಿದ. ಆ ಸಂತೋಷದಲ್ಲಿ ಮೈಮರೆತನಾದರೂ, ಮೊದಲಿಬ್ಬರು ಮಾಡಿದಂತೆ ಮಾಡಲು ಅವನ ಮನಸ್ಸು ಒಪ್ಪಲಿಲ್ಲ. “ನಾನೂ ಅವರಂತೆಯೇ ಹಾರಿಬಿಟ್ಟರೆ ಇಲ್ಲಿಯ ಈ ಆನಂದದ ವಿಷಯವನ್ನು ಬೇರೆಯವರಿಗೆ ತಿಳಿಸುವವರು ಯಾರು? ನಾನೊಬ್ಬನೇ ಆನಂದಿಸಿ ತೃಪ್ತಿಪಟ್ಟರೆ ಸಾಕೆ?” ಎಂದು ಭಾವಿಸಿ ಹಿಂತಿರುಗಿ ಬಂದು ಉಳಿದವರಲ್ಲಿ ಆ ಸಂತೋಷವನ್ನು ಹಂಚಿಕೊಂಡ. ಅವರೆಲ್ಲರೂ ಅದರಲ್ಲಿ ಭಾಗಿಗಳಾಗುವಂತೆ ಮಾಡಿದ.

ಈ ಮೂವರೂ ಒಂದೇ ಗರಡಿಯಲ್ಲಿ ಬೆಳೆದವರಾದರೂ, ಅಲ್ಲಿ ಬೆಳಗಿದ್ದು ಒಬ್ಬನ ಮನಸ್ಸು ಮಾತ್ರ. ಉಳಿದಿಬ್ಬರಲ್ಲಿ ಮನಸ್ಸಿಗಿಂತ ಬುದ್ಧಿಯೇ ಹೆಚ್ಚು ಕೆಲಸಮಾಡಿ ಸ್ವಾರ್ಥಪರತೆಯನ್ನು ಮೆರೆಯಿತು. ಸ್ವಾರ್ಥರಹಿತವಾಗದ ಮನಸ್ಸು ಸಾಧನೆಯ ಶಿಖರವನ್ನು ಪೂರ್ಣವಾಗಿ ಏರಲಾರದು. ಮನಸ್ಸು ಮತ್ತೊಬ್ಬರಿಗೆ ಮರುಗುವಂತಾಗುವುದೇ ಮಹತ್ ಸಾಧನೆ – ಅದೇ ನಿಜವಾದ ವಿದ್ಯೆ. ★

# ಪರಿಣಾಮಕಾರಿ ಬೋಧನೆ

ಪ್ರೊ. ಕೆ.ಎಸ್. ರಘೋತ್ತಮ ರಾವ್



ಶಿಕ್ಷಣವ್ಯವಸ್ಥೆಯಲ್ಲಿ ಬೋಧನೆಯ ಪಾತ್ರ ಅತಿಮುಖ್ಯವಾದುದು. ಬೋಧನೆಯು ಆಕರ್ಷಕವಾಗಿರುವುದರ ಜೊತೆಗೆ ವಿದ್ವತ್ಪೂರ್ಣವೂ ಆಗಿರಬೇಕು. ಇದರ ಮರ್ಮವನ್ನು ಸ್ವಾರಸ್ಯಕರವಾದ ರೀತಿಯಲ್ಲಿ ಈ ಲೇಖನದಲ್ಲಿ ಬಿಂಬಿಸಿರುವ ಲೇಖಕರು ವ್ಯಕ್ತಿತ್ವವಿಕಸನ ಹಾಗೂ ಶೈಕ್ಷಣಿಕ ವಿಚಾರಗಳಲ್ಲಿ ಬಹಳ ಪ್ರಭಾವಶಾಲಿಯಾಗಿ ಮಾತನಾಡಬಲ್ಲ ಪ್ರಸಿದ್ಧ ವಾಗ್ಮಿಗಳು. ಇವರು ಬೆಂಗಳೂರಿನ ಮಾನಸ ಸೆಂಟರ್ ಫಾರ್ ಟ್ರೈನಿಂಗ್ ಆ್ಯಂಡ್ ಡೆವಲಪ್‌ಮೆಂಟ್‌ನ ನಿರ್ದೇಶಕರು.

ಆಂಗ್ಲಭಾಷೆಯಲ್ಲಿ "Teachers are born, not made" ("ಶಿಕ್ಷಕರು ಹುಟ್ಟುತ್ತಾರೆ, ಆಗುವುದಿಲ್ಲ") ಎಂಬ ಒಂದು ನಾಣ್ಣುಡಿ ಇದೆ. ಆದರೆ ಇದನ್ನು ಸಂಪೂರ್ಣವಾಗಿ ಒಪ್ಪಲು ಆಗುವುದಿಲ್ಲ. ಏಕೆಂದರೆ "ಬೋಧನೆ ಎಂಬುದು ಒಂದು ಕಲೆ." ಉಳಿದ ಯಾವುದೇ ಕಲೆಯಂತೆ 'ಬೋಧನೆ'ಯನ್ನು ನಮ್ಮದಾಗಿಸಿಕೊಳ್ಳಬಹುದು, ಅದಕ್ಕೆ ನಮ್ಮಲ್ಲಿ ಸಾಕಷ್ಟು ಆಸೆ, ಪರಿಶ್ರಮ, ಕುಶಲತೆ ಇರಬೇಕು.

ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳನ್ನು ಬೆಳೆಸಿಕೊಂಡರೆ ನಾವೂ ಒಳ್ಳೆಯ ಬೋಧಕರಾಗಬಹುದು. ಪರಿಣಾಮಕಾರಿ ಬೋಧಕರಾಗಲು ನಾವು ಮಾಡಬೇಕಾದದ್ದೇನು?

ಕೆಳಗೆ ಕೊಟ್ಟಿರುವ ಕೆಲವು ಸೂತ್ರಗಳನ್ನು ಅಳವಡಿಸಿಕೊಂಡು, ನಿರಂತರವಾಗಿ ಕಲಿಯುತ್ತಾ, ನಮ್ಮ ಕೌಶಲವನ್ನು ಸಾಣೆ ಹಿಡಿಯುತ್ತಾ ಸಾಧನೆಯ ಹಾದಿಯಲ್ಲಿ ಪ್ರಯಾಣ ಬೆಳೆಸಿದರೆ, ಖಂಡಿತವಾಗಿ ನಾವು, ವಿದ್ಯಾರ್ಥಿಗಳು ಮೆಚ್ಚುವ ಬೋಧಕರಾಗಬಹುದು.

### ಸ್ವಯಂನಿರ್ವಹಣೆ

ಬೋಧನೆ ಪರಿಣಾಮಕಾರಿಯಾಗಲು ಇದು ಅತಿ ಮುಖ್ಯ. ಸ್ವಯಂನಿರ್ವಹಣೆಯಲ್ಲಿ ಶಿಸ್ತು ಅತ್ಯವಶ್ಯಕವಾದದ್ದು. ಶಿಸ್ತನ್ನು ಬೆಳೆಸಿಕೊಂಡರೆ ಕಾಲದ ನಿರ್ವಹಣೆ, ವೇಷಭೂಷಣ ಎಲ್ಲವೂ ಅಚ್ಚುಕಟ್ಟಾಗಿರುತ್ತದೆ. ಅಂಥ ಬೋಧಕರನ್ನು ವಿದ್ಯಾರ್ಥಿಗಳು ಮೆಚ್ಚುತ್ತಾರೆ. ವೇಷಭೂಷಣ ಅಂದಾಕ್ಷಣ ಅದು ದುಬಾರಿ ಬೆಲೆಯದಾಗಿರಬೇಕು ಎಂದು ತಪ್ಪಾಗಿ ಭಾವಿಸಬಾರದು. ಉಡುಪು ವ್ಯಕ್ತಿಯ ವ್ಯಕ್ತಿತ್ವಕ್ಕೆ ಭೂಷಣಪ್ರಾಯವಾಗಿರಬೇಕೇ ಹೊರತು, ಕೆಟ್ಟದ್ದೆನ್ನಿಸುವಂತಿರಬಾರದು. ಅಚ್ಚುಕಟ್ಟಾಗಿ, ಚೊಕ್ಕಟವಾಗಿ ಇದ್ದರೆ ಇತರರ ಗಮನ ಆ ವ್ಯಕ್ತಿಯತ್ತ ಹೆಚ್ಚು ಹರಿಯುತ್ತದೆ. ಸ್ವಯಂಶಿಸ್ತನ್ನು ರೂಢಿಸಿಕೊಂಡಿರುವ ಬೋಧಕನ ಉಡುಪು, ಹಾವಭಾವ ಮೊದಲಾದ ಎಲ್ಲವೂ ಅನುಕರಣೀಯವಾಗುವುದರಿಂದ ವಿದ್ಯಾರ್ಥಿಗಳಿಗೆ ಆತ ಎಲ್ಲ ರೀತಿಯಲ್ಲಿಯೂ ಮಾರ್ಗದರ್ಶಕನಾಗುತ್ತಾನೆ.

### ಸಮಯದ ನಿರ್ವಹಣೆ

ಇನ್ನು ಸಮಯದ ನಿರ್ವಹಣೆ ಬೋಧಕನಿಗೆ ಅತಿ ಅವಶ್ಯವಾದ ಅಂಶ. ತರಗತಿಗೆ ಹೋಗುವಾಗ, ತರಗತಿಯಿಂದ ಬರುವಾಗ ಇದು ಬಹಳ ಮುಖ್ಯ. ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ಬೋಧಕನನ್ನು ಬಹು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಬೋಧಿಸುವಾತ ಪರಿಣಾಮ ಬೀರಿದರೆ ಮಾತ್ರ ಆತ ವಿದ್ಯಾರ್ಥಿಗಳ ಪಾಲಿಗೆ 'ಮಾದರಿ ವ್ಯಕ್ತಿ' ಆಗಿಬಿಡಬಲ್ಲ. ಹಾಗಾದಾಗ ಮಾತ್ರ ಅವರಲ್ಲಿ ಶಿಸ್ತು ಬೆಳೆಯಲು ಸಾಧ್ಯ. ಪರಿಣಾಮಕಾರಿ ಬೋಧನೆಗೆ ಶಿಸ್ತು ಬಹು ಮುಖ್ಯ ಎಂಬುದನ್ನು ಮತ್ತೊಮ್ಮೆ ನೆನಪಿಸಬಯಸುತ್ತೇನೆ.

### ಸಂವಹನ ಕಲೆ

ಯಾವುದೇ ಬೋಧಕನಿಗೆ 'ಸಂವಹನ ಕಲೆ' ಸಿದ್ಧಿಸಿರಬೇಕು. ಈ ಸಂವಹನ ಕಲೆ ಮೂರು ಮುಖ್ಯ ಅಂಶಗಳನ್ನು ಒಳಗೊಂಡಿರುತ್ತದೆ. ೧. ಸರಳ, ೨. ನೇರ, ೩. ಸಂಕ್ಷಿಪ್ತ.

'ಸರಳವಾಗಿ ಏಕಿರಬೇಕು?' ಎಂದರೆ, ಆಂಗ್ಲ ಭಾಷೆಯಲ್ಲಿ ಅದಕ್ಕೆ ಒಂದು ಸುಂದರ ನಾಣ್ಣುಡಿ ಇದೆ, "Communicate to express, not to impress" ಎಂದು. ಅದರ ಅರ್ಥ, ಬೋಧಕ ಹೇಳಿದ್ದನ್ನು ಕೇಳಿಸಿಕೊಂಡವರಿಗೆ ಅದು ಅರ್ಥವಾಗುವಂತಿರಬೇಕು, ಬರೀ ಮನಸೆಳೆಯುವಂತೆ ಮಾತ್ರವೇ ಇರಬಾರದು ಎಂದು.

ಕೆಲವು ಬಾರಿ ಬೋಧಕ ಹೇಳಿದ್ದನ್ನು ಕೇಳಿಸಿಕೊಂಡ ಕೆಲವರು, "ಅವರು ಹೇಳಿದ್ದು ತುಂಬಾ ಚೆನ್ನಾಗಿತ್ತು, ಆದರೆ ಏನು ಹೇಳಿದರೆಂದು ಗೊತ್ತಾಗಲಿಲ್ಲ!" ಎಂದು ಗೊಣಗುತ್ತಿರುತ್ತಾರೆ. ಅದು ಖಂಡಿತಾ 'ಸಂವಹನ' ಅಲ್ಲ. ಸಂವಹನ ಯಾವಾಗಲೂ ಸ್ಪಷ್ಟವಾಗಿರಬೇಕು, ಅಲ್ಲಿ ಯಾವುದೇ ಅನುಮಾನ, ಗೊಂದಲ ಇರಬಾರದು.

ಉದಾಹರಣೆಗೆ 'Both the two of you sit together separately' ಎಂದು ಹೇಳಿದಾಗ, ಕೇಳುಗರ ಗೊಂದಲ ಹೇಳತೀರದ್ದಾಗಿಬಿಡುತ್ತದೆ. ಹೇಳಬೇಕೆನ್ನುವುದನ್ನು, ಮೊದಲೇ ಮನದಟ್ಟು ಮಾಡಿಕೊಂಡು, ಚಿಕ್ಕದಾಗಿ, ಚೊಕ್ಕದಾಗಿ, ಸಂಕ್ಷಿಪ್ತವಾಗಿ ಹೇಳುವುದು ಪರಿಣಾಮಕಾರಿ 'ಸಂವಹನ'ದ ರಹಸ್ಯ!

**ಬೋಧನೆಯ ವಿಧಾನ**

ಸಂದರ್ಭಕ್ಕೆ ಅನುಸಾರವಾಗಿ ಬೋಧಕರು ಸೂಕ್ತ ಸಮಯದಲ್ಲಿ, ಸಂದರ್ಭೋಚಿತವಾಗಿ ಕಥೆಗಳನ್ನು, ನಗೆಹನಿಗಳನ್ನು, ಕವನಗಳನ್ನು ಬಳಸಿಕೊಂಡು ತರಗತಿಗೆ ಹೆಚ್ಚಿನ ಆಕರ್ಷಣೆ ತರಬಹುದು. ಈ ನಿಟ್ಟಿನಲ್ಲಿ ಪಠ್ಯವಿಷಯದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ಪ್ರಕ್ರಿಯೆ ಅತಿ ಮುಖ್ಯ ಅಂಶ. ಅದನ್ನೇ ಇಂಗ್ಲಿಷಿನಲ್ಲಿ involvement ಎಂದು ಕರೆಯುತ್ತೇವೆ.

ಉದಾಹರಣೆಗೆ, ತರಗತಿಯಲ್ಲಿ ಬೋಧಿಸುವಾಗ ಒಮ್ಮೆ ಹಾವಿನ ಬಗ್ಗೆ ಹೇಳಬೇಕಾಗುತ್ತದೆ ಎಂದುಕೊಳ್ಳೋಣ. ಅದರ ಬಗ್ಗೆ ಬೋಧಿಸುವುದಕ್ಕಿಂದ ಮುಂಚೆ, ವಿದ್ಯಾರ್ಥಿಗಳಿಂದಲೇ ಆ ಬಗ್ಗೆ ವಿಷಯ ಹೊರಡಿಸಬೇಕೆಂಬ ಉದ್ದೇಶ ಒಬ್ಬ ಶಿಕ್ಷಕರದು. ಹಾಗಾಗಿ ಅವರು ಒಂದು ಪ್ರಶ್ನೆ ಕೇಳುತ್ತಾರೆ:

"ನಿಮಗೆ ಹಾವಿನ ಬಗ್ಗೆ ಏನೇನು ತಿಳಿದಿದೆಯೋ ಅದನ್ನು ಬೋರ್ಡಿನ ಮೇಲೆ ಬರೆಯಿರಿ."

ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಬರೆಯಲಾರಂಭಿಸುತ್ತಾರೆ:
"ಹಾವು ಹಾಲು ಕುಡಿಯುತ್ತದೆ."
"ಹಾವು ಪುಂಗಿಯ ನಾದಕ್ಕೆ ತಲೆಯಾಡಿಸುತ್ತದೆ."
"ಹಾವಿನ ದ್ವೇಷ ಹನ್ನೆರಡು ವರುಷ."
"ಹಾವು ಮುಂಗುಸಿಗೆ ಹೆದರುತ್ತದೆ." ಇತ್ಯಾದಿ, ಇತ್ಯಾದಿ.

ಈ ಎಲ್ಲಾ ಅಂಶಗಳನ್ನು ಪ್ರತಿಯೊಬ್ಬರೂ ಬೋರ್ಡಿನ ಮೇಲೆಯೇ ಬರೆಯುತ್ತಾರೆ. ಕಡೆಗೆ ಬೋಧಕರು ಮುಗುಳ್ನಕ್ಕು, ಬೋರ್ಡಿನತ್ತ ನಡೆದು, ಹಾವಿಗೆ ಸಂಬಂಧಪಟ್ಟ ನಿಜವಾದ ಅಂಶಗಳನ್ನು ಉಳಿಸಿಕೊಂಡು, ಉಳಿದ ಅಂಶಗಳನ್ನು ಅಳಿಸಿಬಿಡುತ್ತಾರೆ. ಇಲ್ಲಿ ಬೋಧಕ ಮತ್ತು ವಿದ್ಯಾರ್ಥಿಗಳಿಬ್ಬರ 'ತೊಡಗಿಸಿಕೊಳ್ಳುವಿಕೆ' ಅಥವಾ 'involvement' ಗೆ ಹೆಚ್ಚು ಮಹತ್ವ ಇರುತ್ತದೆ. ಇದರಿಂದ ತರಗತಿಯಲ್ಲಿ ಲವಲವಿಕೆ ಮೂಡುತ್ತದೆ.

ಇಲ್ಲಿ ಮತ್ತೊಂದು ಕಥೆಯನ್ನು ಉದಾಹರಿಸಬಹುದು. ಇದು ಬೋಧನೆಯ ವಿಧಾನದ ಮಹತ್ವವನ್ನು ಎತ್ತಿಹೇಳುತ್ತದೆ:

ಇಬ್ಬರು ಆತ್ಮೀಯ ಸ್ನೇಹಿತರಿರುತ್ತಾರೆ. ಅದರಲ್ಲೊಬ್ಬನಿಗೆ ಕಿತ್ತಳೆರಸ ಇಷ್ಟ, ಮತ್ತೊಬ್ಬನಿಗೆ ದ್ರಾಕ್ಷಿರಸ ಇಷ್ಟ. ಒಮ್ಮೆ ಇವರಿಬ್ಬರೂ ವ್ಯಾಪಾರ ಮಾಡಬೇಕೆಂದು ಮನಸ್ಸು ಮಾಡುತ್ತಾರೆ. ಕಿತ್ತಳೆರಸ ಇಷ್ಟಪಡುವವನು ದ್ರಾಕ್ಷಿರಸ ಮಾರಬೇಕೆಂದುಕೊಳ್ಳುತ್ತಾನೆ. ದ್ರಾಕ್ಷಿರಸ ಇಷ್ಟಪಡುವವನು ಕಿತ್ತಳೆರಸ ಮಾರಬೇಕೆಂದು ಮನಸ್ಸು ಮಾಡುತ್ತಾನೆ. ಏಕೆಂದರೆ ದ್ರಾಕ್ಷಿರಸ ಇಷ್ಟಪಡುವವನು ದ್ರಾಕ್ಷಿರಸದ ವ್ಯಾಪಾರ ಮಾಡುವುದಕ್ಕೆ ಹೋದರೆ ಅವನೇ ಅದನ್ನು ಹೆಚ್ಚು ಕುಡಿಯುವ ಸಂದರ್ಭವಿರುತ್ತದೆ. ಅದೇರೀತಿ ಕಿತ್ತಳೆರಸ ಇಷ್ಟ ಪಡುವವನು ಕಿತ್ತಳೆರಸದ ವ್ಯಾಪಾರ ಪ್ರಾರಂಭಿಸಿದರೆ ಅವನೇ ಅದನ್ನು ಹೆಚ್ಚು ಕುಡಿದುಬಿಡುವ ಸಾಧ್ಯತೆ ಇರುತ್ತದೆ. ಅವರು ಕೈಗೊಂಡ ನಿರ್ಧಾರ ಹೆಚ್ಚು ಸೂಕ್ತ ಕೂಡ.

ಸರಿ, ಇಬ್ಬರೂ ಕಿತ್ತಳೆರಸ ಮತ್ತು ದ್ರಾಕ್ಷಿರಸ ಮಾಡಿಕೊಂಡು ಮಾರುಕಟ್ಟೆಗೆ ಹೊರಡುತ್ತಾರೆ. ಹೋಗುವಾಗ ಮಾರ್ಗದಲ್ಲಿ ಅವರಿಗೆ ಆಯಾಸವಾಗುತ್ತದೆ. ದ್ರಾಕ್ಷಿರಸ ಮಾರುವವನಿಗೆ ತನ್ನಲ್ಲಿರುವ ದ್ರಾಕ್ಷಿರಸದ ಬದಲು ಕಿತ್ತಳೆರಸ ಕುಡಿದರಾಯಿತು ಎನ್ನಿಸುತ್ತದೆ. ಜೇಬಿಗೆ ಕೈ ಹಾಕಿದರೆ ಒಂದು ರೂಪಾಯಿ ನಾಣ್ಯ ದೊರೆಯುತ್ತದೆ. ಅದನ್ನು ತೆಗೆದು ಗೆಳೆಯನಿಗೆ ಕೊಟ್ಟು ಕಿತ್ತಳೆರಸ ಕೊಂಡು ಕುಡಿಯುತ್ತಾನೆ.

ಸ್ವಲ್ಪ ಸಮಯದ ನಂತರ ಕಿತ್ತಳೆರಸ ತರುತ್ತಿದ್ದವನಿಗೆ ಬಾಯಾರಿಕೆಯಾಗುತ್ತದೆ. ಅವನು ತನ್ನ ಜೇಬು ಸೇರಿದ್ದ ಒಂದು ರೂಪಾಯಿ ಹೊರತೆಗೆದು ತನ್ನ ಸ್ನೇಹಿತನಿಗೆ ಕೊಟ್ಟು ದ್ರಾಕ್ಷಿರಸ ಕುಡಿಯುತ್ತಾನೆ. ಕೆಲ ಹೊತ್ತಿನ ನಂತರ ಅವನಿಗೆ ಮತ್ತೆ ಬಾಯಾರಿಕೆಯಾಗುತ್ತದೆ. ಅವನು ಇವನಿಗೆ ಒಂದು ರೂ. ಕೊಟ್ಟು ಕಿತ್ತಳೆರಸ ಕುಡಿಯುವುದು, ಇವನು ಅವನಿಗೆ ಒಂದು ರೂ. ಕೊಟ್ಟು ದ್ರಾಕ್ಷಿರಸ ಕುಡಿಯುವುದೂ ದಾರಿಯುದ್ದಕ್ಕೂ ನಡೆಯುತ್ತದೆ. ಮಾರುಕಟ್ಟೆ ತಲುಪುವಷ್ಟರಲ್ಲಿ ಒಂದು ರೂಪಾಯಿ ಹಾಗೇ ಉಳಿದಿರುತ್ತದೆ. ಆದರೆ ಇಡೀ ದ್ರಾಕ್ಷಿರಸ, ಕಿತ್ತಳೆರಸ ಖಾಲಿಯಾಗಿ ಹೋಗಿರುತ್ತದೆ. ವ್ಯಾಪಾರ ಅಂದರೆ ಇದೇ ಏನು?

ಈ ರೀತಿ ನಮ್ಮ ಬೋಧನೆಯೂ ಏಕಪ್ರಕಾರದ್ದಾಗಿಬಿಟ್ಟರೆ ಅದರಲ್ಲಿ ಏನೂ ಸ್ವಾರಸ್ಯ ಇರುವುದಿಲ್ಲ. ಒಬ್ಬರು ಇನ್ನೊಬ್ಬರಿಗೆ ಒಂದು ರೂಪಾಯಿ ಕೊಟ್ಟು ಮಾಡಿದ ವ್ಯವಹಾರದಂತೆ ಅದು ನೀರಸವೂ ನಿಷ್ಪ್ರಯೋಜಕವೂ ಆಗಿಬಿಡುತ್ತದೆ. ಬಗೆಬಗೆಯ ವಿಷಯಗಳನ್ನು, ಹಲವಾರು ಹಾವಭಾವಗಳಲ್ಲಿ, ವಿವಿಧ ಪ್ರಸಂಗಗಳು, ಕಥೆಗಳು, ಉದಾಹರಣೆಗಳ ಮೂಲಕ, ಬೇರೆ ಬೇರೆ ರೀತಿಯಲ್ಲಿ ಮಕ್ಕಳ ಮನಸ್ಸಿಗೆ ನಾಟುವಂತೆ ಕಲಿಸುವುದೇ 'ಪರಿಣಾಮಕಾರಿ ಸಂವಹನಕಲೆ' ಎಂದು ಅನ್ನಿಸಿಕೊಳ್ಳುತ್ತದೆ.

ಇರಲಿ. ಕನ್ನಡ ಪಾಠವನ್ನು ಬೋಧನೆ ಮಾಡುವ ತರಗತಿಯನ್ನು ಹೇಗೆ ಕ್ರಿಯಾತ್ಮಕವಾಗಿ ಉಪಯೋಗಿಸಿಕೊಳ್ಳಬಹುದು ಎಂಬುದಕ್ಕೆ ಮತ್ತೊಂದು ಉದಾಹರಣೆಯನ್ನು ನೋಡೋಣ. ಒಬ್ಬ ಮೇಷ್ಟ್ರು ಬೋರ್ಡಿನ ಮೇಲೆ ಹೀಗೆ ಬರೆಯುತ್ತಾರೆ:

**ಪರ್ವತದೋಳ್ ಶಿಲೆ ಪಾಲ್ಗರೆಯೆ**
**ಪಶುವು ಮಗುವನೆತ್ತಿ ಮುದ್ದಾಡೆ**
**ನಾರಿ ವೇದವನೋದಲ್**
**ಬ್ರಾಹ್ಮಣ ಕಾಗೆ ಮಾಂಸವ ತಿನ್ನಲ್**
**ಅದೇನಾಶ್ಚರ್ಯಂ** ?